<u>ದಿನಾಂಕ**25-09-2025**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>

<u>**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಾದ ಶ್ರೀ **GGP** ರವರಿಂದಃ</u>

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ/ಹಿಂದಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್ ವೈ ಡಿ . ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ/ಹಿಂದಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿ/ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/– ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

RS No. 171/G 4 ಎಕರೆ ಇತ್ತು ಎಂದರೆ ಸರಿ. ಸದರಿ 4 ಎಕರೆ ಜಮೀನನ್ನು ಸದ್ರುದ್ದೀನ್ ಎಮ್ ಫೀವಾಲೆ ರವರಿಗೆ ತಹಶೀಲ್ದಾರ ಮಂಜೂರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1973 ರಲ್ಲಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು 1997 ರಲ್ಲಿ ರೈತಾವಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರೈತಾವಾ ಆದ ನಂತರ ದಿಃ12.04.1999 ರಂದು ಸದರಿ ಸದ್ರುದ್ದೀನ್ ರವರ ವಾರಸುದಾರರು 4 ಎಕರೆಯ ಪೈಕಿ 2 ಎಕರೆ ಜಮೀನನ್ನು ಮಹದೇವ ಎಸ್ ಮಹಗಾವಕರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1982 ರಲ್ಲಿ ಸದ್ರುದ್ದೀನ್ ಮೃತ ಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು RS No. 171/Gಗೆ ಸಂಬಂಧಪಟ್ಟ ಕಂದಾಯ ದಾಖಲೆಗಳನ್ನು 1972 ರಿಂದ ಇಲ್ಲಿಯವರೆಗೆ ನೋಡಿಲ್ಲ ಎಂದರೆ ಸರಿ. ಸದ್ರುದ್ದೀನ್ ಮೃತ ಪಟ್ಟ ನಂತರ ಅವರ ವಾರಸುದಾರರಾದ ಪ್ರತಿವಾದಿಗಳ ಹೆಸರಿಗೆ ME no.1066 ರ ಪ್ರಕಾರ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ದಾವಾ ಸ್ವತ್ತು ಪ್ರತಿವಾದಿಗಳ ಹೆಸರಿಗೆ ಇದೆ ಎಂದರೆ ಸರಿ.

ನಿಪಿ-2ನ್ನು ವಾದಿ ನನಗೆ ಬರೆದುಕೊಟ್ಟಿದ್ದಾರೆ. ವಾದಿ ದಾವಾ ಸ್ವತ್ತಿನ ಮಾಲೀಕರಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ನನ್ನ ತಂದೆ ಖರೀದಿ ಮಾಡಿದ್ದಾರೆ. ನಿಪಿ-3 ನೋಂದಾವಣೆ ಆಗಿಲ್ಲ ಎಂದರೆ

ಸರಿಯಲ್ಲ. ನಾನು ನೋಂದಾವಣೆ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿರುವ ಸಹಿಗಳನ್ನು ಪ್ರತಿವಾದಿಗಳು ಮಾಡಿಲ್ಲ ಮತ್ತು ಸದರಿ ಸಹಿಗಳನ್ನು ಪೊರ್ಜರಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-3ಕ್ಕೆ ಸಾಕ್ಷಿಯಾಗಿ ಸಹಿಮಾಡಿದರು ವಾದಿಯ ಆಪ್ತರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳ ಕಡೆಯವರು ಸಹ ಇದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಮತ್ತು ಪ್ರತಿವಾದಿಯ ಕಡೆಯವರು ಎಷ್ಟು ಜನರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಾಕ್ಷಿದಾರರು ನನ್ನ ತಂದೆಗೆ ಮತ್ತು ನನಗೆ ಪರಿಚಯ ಇರುವ ಸಾಕ್ಷಿದಾರರು ಎಂದರೆ ಸರಿ.

ಸದರಿ ನಿಪಿ-3 ರ ಆಧಾರದ ಮೇಲೆ ವಾದಿಯ ಹೆಸರಿಗೆ ನಿಪಿ-1 ರಲ್ಲಿ ಹೆಸರನ್ನು ಪ್ರತಿವಾದಿಗಳಿಗೆ ಗೊತ್ತಿಲ್ಲದಂತೆ ನಮೂದಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. MRH18/2016-17 ರಂತೆ ಪ್ರತಿವಾದಿಗಳಿಗೆ ಗೊತ್ತಿಲ್ಲದಂತೆ ಖಾತೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸದರಿ ಸಂಗತಿ ಗೊತ್ತಾದ ನಂತರ ತಹಶೀಲ್ದಾರರವರಿಗೆ ವಾದಿ ಗೊತ್ತಿಲ್ಲದಂತೆ ತನ್ನ ಹೆಸರನ್ನು ಬದಲಾವಣೆ ಮಾಡಿಕೊಂಡಿದ್ದಾನೆ ಎಂದು ತಕರಾರನ್ನು ಮೌಖಿಕವಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೀತಿ ತಕರಾರು ಮಾಡಿದ ನಂತರ ಕೂಡಲೇ MRH No. 29 dtd:28.09.2016 ರ ಪ್ರಕಾರ ವಾದಿಯ ಹೆಸರಿಗೆ ಇರುವ ಖಾತೆಯನ್ನು ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಮ್ ಆರ್ ನ್ನು ಪ್ರಶ್ನೆ ಮಾಡಿ ಅಪೀಲು ಹಾಕಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು ಪ್ರತಿವಾದಿಗಳು ಖುದ್ದಾಗಿ ತಾವೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಬಳಿ ಸ್ವಾಧೀನ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 100 ರಿಂದ 150 ಕಾಜು ಮರಗಳು ಇವೆ ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು 50 ರಿಂದ 60ಕಾಜು ಮರಗಳನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ನಾವು ಮರಗಳನ್ನು ಹಾಕಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನನ್ನ ತಂದೆ ಗುರುತು ಹಿಡಿಯುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-3ನ್ನು ಎಲ್ಲಿ ಬರೆದರು, ಯಾರು ಬರೆದರು ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ತಂದೆಗೆ ಗೊತ್ತಿರುತ್ತದೆ. ನಿಪಿ-3 ಪತ್ರವನ್ನು ಯಾರು ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಿಪಿ-3 ರ ಬಗ್ಗೆ ನನಗೆ ಹೆಚ್ಚು ಮಾಹಿತಿ ಇಲ್ಲ. ನನ್ನ ತಂದೆಗೆ ನಿಪಿ-3 ರಬಗ್ಗೆ ಗೊತ್ತಿರುತ್ತದೆ. ನಿಪಿ-3ನ್ನು ಸೃಷ್ಟಿ ಮಾಡಿ ಹಾಜರುಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ವರೆಗೂ ದಾವಾ ಸ್ವತ್ತಿನ ದಾಖಲೆಗಳು ಪ್ರತಿವಾದಿಗಳ ಹೆಸರಿಗೆ ಇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಲಪಟಾಯಿಸಲು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ 13,500/- ಹಣ ವನ್ನು ಪ್ರತಿವಾದಿಗಳಿಗೆ ಕೊಟ್ಟಿದ್ದೇವೆ ಎಂದುಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1 **ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಬೆಳಗಾವಿ.**

ಒ ಎಸ್ ನಂಃ **447/2019**

**ಪಿಡಬ್ಲೂ : 2**